ಆ) ಹಾಗಿದ್ದಲ್ಲಿ ಮಂಜೂರು ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು?

ಎಂ. ಚಂದ್ರಶೇಖರ್. (ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ.

ಆ) ಉದ್ಭವಿಸಂವುದಿಲ್ಲ.

ವಸತಿ ಸೌಲಭ್ಯದ ಕಟ್ಟಡದ ಕಾಮಗಾರಿ ಬಗ್ಗೆ

೨೩೫೫. ಶ್ರೀ ಚಂದ್ರಶೇಖರ್ ವಡಾಮನಿ (ಪರಸಗಡ).—ಮಾನ್ಯ ವಾರ್ತಾ ಪ್ರವಾಸೊದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆ ಸೌಂದತ್ತಿ ಶ್ರೀ ಯಲ್ಲಮ್ಮ ಕ್ಷೇತ್ರದ ಬಳಿ ಯಾಂತ್ರಿಕ ವಸತಿ ಸೌಲಭ್ಯ ವನ್ನೊದಗಿಸಲು ೩೬ ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲು ಮಾನ್ಯ ಮುಖ್ಯ ಮಂತ್ರಿಗಳು ದಿನಾಂಕ ೧೧-೧೧-೮೭ ರಂದು ಅಡಿಗಲ್ಲಾಕಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಸದರಿ ಕಟ್ಟಡದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗಂವುದು?

ಇ) ಸದರಿ ಕ್ಷೇತ್ರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರು ೬ ಲಕ್ಷ ರೂಗಳ ವೆಚ್ಚದ ಲಘು ಉಪಾಹಾರದ ಕಟ್ಟಡದ ಕಾಮಗಾರಿಯು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಸದರಿ ಕಾಮಗಾರಿಗೆ ಇದುವರೆವಿಗೆ ವೆಚ್ಚವಾಗಿರುವ ಹಣವೆಷ್ಟು? ಮಂತ್ರಿ ಸ್ಥಗಿತಗೊಂಡಿರುವ ಕಾಮಗಾರಿಯನ್ನು ಪೂರ್ತಿಗೊಳಿಸಲು ಸರ್ಕಾರದವರಂ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ದಿನಾಂಕ ೧೧-೧೧-೮೭ರಂದು ಮಾನ್ಯ ಮುಖ್ಯ ಮಂತ್ರಿಗಳು ಯಾತ್ರಿಕ ಕಟ್ಟಡ ವಸತಿ ಸೌಕರ್ಯ ಒದಗಿಸಲು ಅಡಿಗಲ್ಲು ಹಾಕಿರುವರು.

ಆ) ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾದ ಕೂಡಲೇ ಕಾಮಗಾರಿಯನ್ನು ಭಾರತೀಯ ಯಾತ್ರಿ ಆವಾಸ್ ವಿಕಾಸ್ ಸಮಿತಿಯವರು ಕ್ರಮ ಕೈಗೊಳ್ಳುವರು.

ಇ) ಇಲ್ಲ.

ಈ) ಇದುವರೆವಿಗೂ ರೂ. ೩೦,೦೦೦ ಗಳನ್ನು ವೆಚ್ಚ ಮಾಡಲಾಗಿದೆ.

ಗ್ರಾಮ ಪಂಚಾಯಿತ್‌ಗಳ ಹಾಗೂ ತಾಲ್ಲೂಕು ಬೋರ್ಡ್‌ಗಳ ಸಿಬ್ಬಂದಿಯ ಬಗ್ಗೆ

೨೨೦೫. ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಕ್ಫ್ ಹಾಗೂ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಜಿಲ್ಲಾ ಪರಿಷತ್ತು ಹಾಗೂ ಮಂಡಲ ಪಂಚಾಯತ್‌ಗಳು ಅಸ್ತಿತ್ವಕ್ಕೆ ಬಂದ ನಂತರ ಈ ಹಿಂದೆ ತಾಲ್ಲೂಕಂ ಮಂಡಲಿ ಮತ್ತು ಗ್ರಾಮ ಪಂಚಾಯತ್ ಕಾರ್ಯಾಲಯಂಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಹಾಗೂ ಇತರ ಸಿಬ್ಬಂದಿಯ ಸೇವೆಯನ್ನು ಮುಂದುವರಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಅವರ ಸೇವೆಯನ್ನು ಇತರ ಸರಕಾರಿ ಅಥವಾ ಪೌರ ಕಾರ್ಮಿಕ ಸೇವಾ ನಿಯಮಗಳ ಪ್ರಕಾರ ಸಕ್ರಮಗೊಳಿಸಲಾಗಿದೆಯೇ?

ಇ) ಸದರಿ ಸಿಬ್ಬಂದಿ ಹಾಗೂ ಕಾರ್ಮಿಕರಿಗೆ ಕನಿಷ್ಟ ವೇತನ ನಿಗದಿ ಗೊಳಿಸಲಾಗಿದೆಯೇ?

ಈ) ಹಾಗಿಲ್ಲದಿದ್ದಲ್ಲಿ, ಯಾವಾಗ ನಿಗದಿಗೊಳಿಸಲಾಗುವುದು?

ಶ್ರೀ ಅಬ್ದುಲ್‌ಜಬ್ಬಾರ್‌ಸಾಬ್. (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಹೌದು.

ಆ) ಇಲ್ಲ.

ಇ) ಇಲ್ಲ.

ಈ) ಈ ವಿಷಯವನ್ನು ಜಿಲ್ಲಾ ಪರಿಷತ್ ,ಮತ್ತು ಮಂಡಲ ಪಂಚಾಯಿತಿಯವರೇ ನಿರ್ಧರಿಸ ಬೇಕಾಗಿದೆ.

ಸುಬ್ರಮಣ್ಯ ನಗರದ ಕೆರೆ ಅಂಗಳದಲ್ಲಿ ಆಟದ ಮೈದಾನದ ರಚನೆ.

೫೪೭. ಶ್ರೀ ಎಂ. ಎಸ್. ಕೃಷ್ಣನ್. (ರಾಜಾಜಿನಗರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಸುಬ್ರಮಣ್ಯನಗರ ಪಾಲಿಕೆ ವಿಭಾಗದಲ್ಲಿ ರುವ ಕೆರೆ ಅಂಗಳವನ್ನು ಉದ್ಯಾನವನ ಮತ್ತು ಆಟದ ಮೈದಾನವನ್ನಾಗಿ ಪರಿವರ್ತಿಸಬೇಕೆಂದು ಶಾಸಕರೂ, ನಾಗರೀಕರೂ ಅನೇಕ ಬಾರಿ ಸರ್ಕಾರವನ್ನು ಒತ್ತಾಯಿಸಿರುವುದು ನಿಜವೇ?

ಆ) ಯಾರೋ ಕೋರ್ಟಿನಿಂದ ತಡೆ ಆಜ್ಞೆ ತಂದಿರುವುದರಿಂದ, ಈ ಕೆಲಸ ಮಾಡಲಾಗಿಲ್ಲ ವೆಂದೂ ತಡೆ ಆಜ್ಞೆಯನ್ನು ಆದಷ್ಟು ಶೀಘ್ರವಾಗಿ ತೆರವು ಮಾಡಲು ಕ್ರಮ ಕೈಕೊಳ್ಳುವರೆಂದು ಸರ್ಕಾರ ಶಾಸನ ಸಭೆಯಲ್ಲಿ ಆಶ್ವಾಸನೆ ನೀಡಿದ್ದು ನಿಜವಲ್ಲವೇ?

ಇ) ತಡೆಯಾಜ್ಞೆ ತೆರವಾಗಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಕೆಲವು ಸ್ವಹಿತ ಸಾಧಕರು ಈ ಕೆರೆ ಅಂಗಳವನ್ನು ತಮ್ಮದನ್ನಾಗಿ ಮಾಡಿಕೊಳ್ಳಲು ಯತ್ನಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ, ಅದನ್ನು ತಡೆಗಟ್ಟಲು ಕೈಗೊಂಡ ಅಥವಾ ಕೈಗೊಳ್ಳುವ ಕ್ರಮವೇನು?

ಅ) ಹೌದು.

ಆ) ಹೌದು.

ಇ) ತಡೆಯಾಜ್ಞೆಯನ್ನು ತೆರವು ಮಾಡಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿ, ನ್ಯಾಯಾಲಯವು ಈ ಜಮೀನಿನಲ್ಲಿ ಹಾದುಹೋಗುವ ರಸ್ತೆ ರಿಪೇರಿ ಮಾಡಲು ಮಾತ್ರ ಅನುಮತಿ ನೀಡಿದೆ.

ಈ) ನ್ಯಾಯಾಲಯದಲ್ಲಿ ಇರುವ ದಾವೆ ಮುಗಿದ ನಂತರ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಬೆಳಗಾಂ ಜಿಲ್ಲೆಗೆ ನೂರು ಬಾವಿ ಯೋಜನೆಯ ಬಗ್ಗೆ

೫೬೪. ಶ್ರೀಮತಿ ಶಕುಂತಲಾ ಟಿ. ಚೌಗಲೆ (ಚಿಕ್ಕೋಡಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತ ವಕ್ಫ್ ಹಾಗೂ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೭-೮೮ನೇ ಸಾಲಿನಲ್ಲಿ ಬೆಳಗಾಂ ಜಿಲ್ಲೆಗೆ ನೂರು ಭಾವಿ ಯೋಜನೆ ಅಡಿಯಲ್ಲಿ ಮಂಜೂರಾಗಿ ಕೆಲಸ ಪ್ರಾರಂಭವಾಗಿರುವ ಒಟ್ಟು ಭಾವಿಗಳ ಸಂಖ್ಯೆಗಳೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)